# ಆಂದೋಲನ

ದಿನಪತ್ರಿಕೆ

ಸಂಪಾದಕ : ರಾಜಶೇಖರ ಕೋಟಿ

ಸಂಪುಟ: ೪೬, ಸಂಚಿಕೆ: ೨೪೦
ರಾಷ್ಟ್ರೀಯ ಶಕ ೧೯೩೯
ಶರತ್ –ಭಾದ್ರಪದ ೧೬
◐ ಪಾಡ್ಯ– ಪೂರ್ವಾಬಾದ್ರಾ,
ಗುರುವಾರ, ಸೆ.೭, ೨೦೧೭,
ದೂರವಾಣಿ: ೨೪೪೯೫೧೧,
೨೪೪೯೫೦೪, ೨೪೪೯೫೦೫
ಫ್ಯಾಕ್ಸ್: ೨೪೪೯೫೦೩,
ಪುಟ: ೧೨, ರೂ. ३






ರಾಜ್ಯದ ವಿವಿಧೆಡೆಯಿಂದ ಆಗಮಿಸಿದ ಸಾಹಿತಿಗಳು, ಚಿಂತಕರು, ಹೋರಾಟಗಾರರು, ಜನಸಾಮಾನ್ಯರು, ಬೆಂಗಳೂರಿನ ಪುರಭವನದೆದುರು ಬುಧವಾರ ಬೆಳಗ್ಗೆ ಜಮಾವಣೆಗೊಂಡು ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಖಂಡಿಸಿ ಚಿತ್ರಪತ್ರ, ಬ್ಯಾನರ್ ಹಿಡಿದು ಗಂಟೆಗಳ ಕಾಲ ಪ್ರತಿಭಟನೆ ನಡೆಸಿದರು.

# ಹಂತಕರ ಪತ್ತೆಗೆ ವಿಶೇಷ ತಂಡ

## ಗೌರಿ ಲಂಕೇಶ್ ಹತ್ಯೆ ತನಿಖೆಗೆ ಐಜಿ ಶ್ರೇಣಿ ಅಧಿಕಾರಿ ನೇಮಕ: ಸಿಎಂ

ಬೆಂಗಳೂರು,ಸೆ.೬– ಹಿರಿಯ ಪತ್ರಕರ್ತೆ ಹಾಗೂ ವಿಚಾರವಾದಿ ಗೌರಿ ಲಂಕೇಶ್ ಅವರ ಹತ್ಯೆ ಪ್ರಕರಣದ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ)ವನ್ನು ರಚಿಸಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಪ್ರಕಟಿಸಿದ್ದಾರೆ.

ಬೆಂಗಳೂರಿನಲ್ಲಿ ಬುಧವಾರ ಹಿರಿಯ ಪೊಲೀಸ್ ಅಧಿಕಾರಿಗಳ ತುರ್ತು ಸಭೆ ನಡೆಸಿದ ಮುಖ್ಯಮಂತ್ರಿಗಳು ಬಳಿಕ ಸುದ್ದಿಗೋಷ್ಠಿ ನಡೆಸಿದರು. ಪ್ರಕರಣದ ತನಿಖೆಗಾಗಿ ಐಜಿ ಶ್ರೇಣಿ ಅಧಿಕಾರಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿದೆ. ಗೃಹ ಸಚಿವರು, ಪೊಲೀಸ್ ಮಹಾ ನಿರ್ದೇಶಕರು ಮತ್ತು ಇತರ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿದ ನಂತರವೇ ಎಸ್‌ಐಟಿ ರಚಿಸಲಾಗಿದೆ. ವಿಶೇಷ ತನಿಖಾ ತಂಡಕ್ಕೆ ಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ತನಿಖೆಗಾಗಿ ಕಾಲಮಿತಿಯನ್ನೂ ವಿಧಿಸಿಲ್ಲ ಎಂದು ವಿವರ ನೀಡಿದರು.

ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆ. ಈ ವಿಶೇಷ ತನಿಖಾ ತಂಡಕ್ಕೆ ಇದೊಂದೇ ಪ್ರಕರಣದ ತನಿಖಾ ಜವಾಬ್ದಾರಿ ನೀಡಲಾಗುತ್ತದೆ. ತನಿಖೆಗಾಗಿ ಎಷ್ಟು ಸಿಬ್ಬಂದಿಗಳನ್ನು ಬೇಕಾದರೂ ಬಳಸಿಕೊಳ್ಳುವಂತೆ ಹೇಳಲಾಗಿದೆ ಎಂದರು.

- ಐಜಿ ನೇತೃತ್ವ ೧೯ ಹಿರಿಯ ಅಧಿಕಾರಿಗಳ ತಂಡ
- ಸಿಸಿಟಿವಿ ದೃಶ್ಯಾವಳಿ ಪರಿಶೀಲನೆ- ರೇಖಾಚಿತ್ರ ರಚನೆ
- ಮೊಬೈಲ್ ಕರೆ ಮಾಹಿತಿ ಶೋಧ: ವಾಹನ ಶೋಧಕ್ಕೆ ನಾಕಾಬಂಧಿ

**ಸಿಸಿಟಿವಿ ದೃಶ್ಯಾವಳಿ ಪರಿಶೀಲನೆ:** ಈ ಮಧ್ಯೆ ಗೌರಿ ಅವರ ಹಂತಕರ ಪತ್ತೆಗಾಗಿ ಸಿಸಿಬಿ ಜಂಟಿ ಪೊಲೀಸ್ ಆಯುಕ್ತ ಸತೀಶ್ ಕುಮಾರ್ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ೩ ವಿಶೇಷ ತಂಡಗಳು ಮಂಗಳ ವಾರ ರಾತ್ರಿಯಿಂದಲೇ ತನಿಖೆ ಚುರುಕುಗೊಳಿಸಿದ್ದವು. ಗೌರಿ ಲಂಕೇಶ್ ಅವರ ಮನೆ ಸುತ್ತ ಅಳವಡಿಸಿದ್ದ ಕ್ಲೋಸ್ ಸರ್ಕ್ಯೂಟ್ ಟೆಲಿವಿಷನ್‌ನ ೪ ಕ್ಯಾಮೆರಾಗಳಲ್ಲಿ ದಾಖಲಾಗಿರುವ ಚಿತ್ರಾವಳಿಗಳನ್ನು ಪರಿಶೀಲಿಸಿದ್ದಾರೆ. ಅಲ್ಲದೇ, ಸುತ್ತಮುತ್ತಲ ರಸ್ತೆಗಳಲ್ಲಿನ ಮನೆಗಳಲ್ಲಿ ಅಳವಡಿಸಿರುವ ಸಿಸಿಟಿವಿ ಫೂಟೇಜ್‌ಗಳನ್ನು ವಶಕ್ಕೆ ಪಡೆದು, ವಾರದಿಂದ ಕಳೆದ ಮಂಗಳವಾರ ರಾತ್ರಿವರೆಗೆ ದಾಖಲಾದ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಿದ್ದಾರೆ.

ಗೌರಿ ಅವರು ಮಂಗಳವಾರ ರಾತ್ರಿ ಮನೆಗೆ ಬಂದಾಗ ಹೆಲ್ಮೆಟ್ ಧರಿಸಿದ್ದ ವ್ಯಕ್ತಿಯೊಬ್ಬ ಅತ್ಯಂತ ಸಮೀಪದಿಂದ ಗುಂಡಿನ ಮಳೆಗರೆದಿರುವ ಚಿತ್ರ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎನ್ನಲಾಗಿದೆ.

⏭ ೮





ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಸಂಸ ಅಂಗಳದಲ್ಲಿ ಗೌರಿ ಲಂಕೇಶ್ ಅವರ ಅಂತಿಮ ದರ್ಶನ ಪಡೆದು ಗೌರವ ಸಲ್ಲಿಸಿದರು. ಸಚಿವರಾದ ಆಂಜನೇಯ, ಉಮಾಶ್ರೀ, ಸಂಸದ ವೀರಪ್ಪಮೊಯ್ಲಿ, ಹೋರಾಟಗಾರ ವಾಟಾಳ್ ನಾಗರಾಜ್, ಗೌರಿ ಅವರ ತಾಯಿ ಇಂದಿರಾ ಮಗಳಿಗೆ ಕೊನೆಯ ಬಾರಿಗೆ ಮುತ್ತಿಟ್ಟರು. ಇಂದ್ರಜಿತ್ ಮತ್ತು ಕವಿತಾ, ಪ್ರಕಾಶ್ ರೈ ಮತ್ತಿತರರು ಚಿತ್ರದಲ್ಲಿದ್ದಾರೆ.

## ಪ್ರಗತಿಪರರ ಹತ್ಯೆಯಿಂದ ಚಿಂತನೆ ಅಂತ್ಯಗೊಳಿಸಲಾಗದು

### ಚಿಂತಕರು, ಹೋರಾಟಗಾರರ ಒಡಲಾಗ್ನಿಯ ಆಕ್ರೋಶ

ಬೆಂಗಳೂರು,ಸೆ.೬– ರಾಜಧಾನಿಯ ಸಾಂಸ್ಕೃತಿಕ ಕೇಂದ್ರ ರವೀಂದ್ರ ಕಲಾಕ್ಷೇತ್ರದಲ್ಲಿ ಬುಧವಾರ ಬೆಳಿಗ್ಗೆಯಿಂದ ಸಂಜೆವರೆಗೂ ಒಂದೆಡೆ ಮಡುಗಟ್ಟಿದ ಶೋಕ, ಮತ್ತೊಂದೆಡೆ ಸಾತ್ವಿಕ ಸಿಟ್ಟಿನ ವಾತಾವರಣ ಅನಾವರಣ ಗೊಂಡಿತ್ತು.

ರವೀಂದ್ರ ಕಲಾಕ್ಷೇತ್ರದ ಆವರಣ ಅಶ್ರು ತರ್ಪಣ ಹಾಗೂ ಸಾತ್ವಿಕ ಸಿಟ್ಟಿನಿಂದ ತುಂಬಿಹೋದಂತೆ ಭಾಸವಾಯಿತು. ಪಾರ್ಥಿವ ಶರೀರದ ದರ್ಶನ ಪಡೆಯುತ್ತಿದ್ದಂತೆ ಚಿಂತಕರು, ಕಲಾವಿದರು, ಪ್ರಗತಿಪರರು, ಸಾಹಿತಿಗಳು ತಮಗೇ ಅರಿವಿಲ್ಲದಂತೆ ಕಂಬನಿ ಸುರಿಸುತ್ತಿದ್ದರು.

ಇದೇ ವೇಳೆ, ಪುರಭವನದ ಮುಂಭಾಗದಲ್ಲಿ ಭಿತ್ತಿಪತ್ರಗಳು, ಬ್ಯಾನರ್‌ಗಳನ್ನು ಹಿಡಿದ ಕೈಗಳು ಮುಷ್ಟಿಕಟ್ಟಿದ್ದವು. ಘೋಷಣೆ ಗಳೂ ಮೊಳಗುತ್ತಿದ್ದವು.

ಈ ಸಂದರ್ಭದಲ್ಲಿ ವಿಚಾರವಾದಿಗಳು, ಪ್ರಗತಿಪರ ಚಿಂತಕರನ್ನು ಹತ್ಯೆ ಮಾಡುವ ಮೂಲಕ ಅವರ ಯಾವುದೇ ವಿಚಾರ ಮತ್ತು ಸಮಾಜಮುಖಿ ಆಲೋಚನೆಗಳನ್ನು ಚಿಂತನೆಗಳನ್ನು ಅಂತ್ಯಗೊಳಿಸಲು ಸಾಧ್ಯವಿಲ್ಲ ಎಂದು ನಾಡಿನ ಪ್ರಗತಿಪರ ಹೋರಾಟಗಾರರು, ಚಿಂತಕರು ಪುರಭವನದ ಮುಂದೆ ಗುಡುಗಿದರು.

ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಅವರ ಹತ್ಯೆ ಖಂಡಿಸಿ ಪುರಭವನದ ಎದುರು ನಡೆದ ಪ್ರತಿಭಟನೆಯಲ್ಲಿ ನಾಡಿನ ವಿವಿಧೆಡೆಯ ನೂರಾರು ಸಾಹಿತಿಗಳು, ಪ್ರಗತಿಪರ ಚಿಂತಕರು ಭಾಗವಹಿಸಿ ಹತ್ಯೆ ಖಂಡಿಸಿದರು. ಸಭೆಯಲ್ಲಿ ಮಾತನಾಡಿದ ಬಹುತೇಕ ಮುಖಂಡರು ಗೌರಿ ಹತ್ಯೆ ಮಾಡಿದಾಕ್ಷಣ ಅವರು ಪ್ರತಿಪಾದಿಸಿದ್ದ ಸಿದ್ಧಾಂತವನ್ನು, ವಿಚಾರಧಾರೆಗಳನ್ನು ಮುಗಿಸಿದ್ದೇವೆ ಎಂದು ಯಾರಾದರೂ ಭಾವಿಸಿದ್ದರೆ ಅದು ಮೂರ್ಖತನದ ಪರಮಾವಧಿ ಹೋರಾಟ ಇಲ್ಲಿಗೆ ನಿಲ್ಲುವುದಿಲ್ಲ ಎಂದು ಎಚ್ಚರಿಕೆಯ ಸಂದೇಶ ರವಾನಿಸಿದರು.

ನಾಡಿನ ಸಾಕ್ಷೀಪ್ರಜ್ಞೆ ಪ್ರಗತಿಪರ ಚಿಂತನೆಗಳಿಗೆ ಇದು ಸವಾಲಿನ ಸಂದರ್ಭ. ಇನ್ನಷ್ಟು ಗಟ್ಟಿಯಾಗಿ ನಿಂತು ಮೂಲಭೂತವಾದಿ ಶಕ್ತಿಗಳನ್ನು ಎದುರಿಸಬೇಕಿದೆ ಎಂದು ಪಣತೊಟ್ಟರು.

⏭ ೮

## ಹೋರಾಟಗಾರ್ತಿಗೆ ಕಂಬನಿಯ ವಿದಾಯ

### ನಂಬಿದ ತತ್ವಗಳಿಗನುಗುಣವಾಗಿಯೇ ನಡೆದ ಗೌರಿ ಲಂಕೇಶ್ ಅಂತ್ಯಕ್ರಿಯೆ

ಬೆಂಗಳೂರು,ಸೆ.೬– ಅಲ್ಲಿ ದುಃಖ ಮಡುಗಟ್ಟಿತ್ತು. ಹೋರಾಟದ ಲಾವಾರಸದ ಮೇಲೆ ಸಂಯಮದ ಮಂಜಿನಗಡ್ಡೆಯನ್ನು ಹೊದಿಸಿಕೊಂಡಿದ್ದ ಮನಸ್ಸುಗಳು... ಜನ ಸಾಗರವಾಗಿ ಹರಿದು ಬರುತ್ತಲೇ ಇತ್ತು. ಎಲ್ಲರ ಎದೆಯೊಳಗೂ ನೋವಿನ ಅಲೆಗಳು ಅಪ್ಪಳಿಸುತ್ತಿವೆ ಎಂಬುದನ್ನು ಅವರ ಮ್ಲಾನ ವದನಗಳೇ ಸಾರಿ ಹೇಳುತ್ತಿದ್ದವು. ಇಂಥ ಸನ್ನಿವೇಶದಲ್ಲಿ ದಿಟ್ಟ ಪತ್ರಕರ್ತೆ, ಸಾಮಾಜಿಕ ಹೋರಾಟಗಾರ್ತಿ ಗೌರಿ ಲಂಕೇಶ್ ಅವರ ಅಂತ್ಯ ಸಂಸ್ಕಾರ ನೆರವೇರಿತು.

- ಸಂಸ ಅಂಗಳ, ರುದ್ರಭೂಮಿ ಎರಡೂ ಕಡೆ ಹಾಜರಾಗಿ ಗೌರವ ಸಲ್ಲಿಸಿದ ಮುಖ್ಯಮಂತ್ರಿ
- ಮಿಂಟೊ ಆಸ್ಪತ್ರೆಗೆ ನೇತ್ರದಾನ
- ಸರ್ಕಾರಿ ಗೌರವ, ಪೊಲೀಸ್ ರಕ್ಷೆಯೊಂದಿಗೆ ವಿದಾಯ

ನಗರದ ಚಾಮರಾಜಪೇಟೆಯಲ್ಲಿರುವ ಟಿ.ಆರ್. ಮಿಲ್ ಪ್ರದೇಶದಲ್ಲಿನ ಲಿಂಗಾಯಿತರ ರುದ್ರಭೂಮಿಯಲ್ಲಿ ಯಾವುದೇ ಸಾಂಪ್ರದಾಯಿಕ ಚೌಕಟ್ಟು ಇಲ್ಲದೇ, ಮಂತ್ರ, ತಂತ್ರಗಳ ಪ್ರಕ್ರಿಯೆಗಳಿಲ್ಲದೇ ಗೌರಿ ಲಂಕೇಶ್ ಅವರ ಮೃತದೇಹವನ್ನು ಶವದ ಪೆಟ್ಟಿಗೆಯಿಂದ ನೇರವಾಗಿ ಮಣ್ಣಿಗೆ ಇಳಿಸಲಾಯಿತು. ಪ್ರಕೃತಿ ತನ್ನದೇ ಕಂದನನ್ನು ಎರಡು ಬಾಹುಗಳನ್ನು ಚಾಚಿ ನೋವಿನಿಂದಲೇ ಅಪ್ಪಿಕೊಂಡಂತಾಯಿತು. ನೆರೆದಿದ್ದವರ ಭಾವನೆಗಳು ಕಣ್ಣೀರಾಗಿ ಚಿಮ್ಮಲು ತವಕಿಸಿದ್ದವು. ಅದೆಷ್ಟೋ ಮಂದಿ ಭಾವನೆ ನಿಯಂತ್ರಿಸಲು ಅಶಕ್ತರಾಗಿ ಕಂಬನಿ ಮಿಡಿದರು.

⏭ ೮

'ಕಟ್ಟುವೆವು ನಾವು ಹೊಸ ನಾಡೊಂದನು
ರಸದ ಬೀಡೊಂದನು
ಹೊಸ ನೆತ್ತರುಕ್ಕುಕ್ಕಿ ಆರಿ ಹೋಗುವ ಮುನ್ನ
ಹರೆಯದೀ ಮಾಂತ್ರಿಕನ ಮಾಟ ಮುಸುಳುವ ಮುನ್ನ
ಉತ್ಸಾಹ ಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು'...

ಎಂದು ಖ್ಯಾತ ಕವಿ ಗೋಪಾಲಕೃಷ್ಣ ಅಡಿಗರ ಕಾವ್ಯದ ಸಾಲುಗಳನ್ನು ಜೋರು ದನಿಯಲ್ಲಿ ಹಾಡುತ್ತಲೇ ಗೌರಿ ಲಂಕೇಶ್ ಅವರ ಪಾರ್ಥಿವ ಶರೀರವನ್ನು ಮಣ್ಣಿನ ಕುಣಿಗೆ ಇಳಿಸಲಾಯಿತು. ಸಂಜೆ ೪.೫೫ಕ್ಕೆ ಸರಿಯಾಗಿ ಗೌರಿ ಅವರ ಶರೀರ ಮಣ್ಣಲ್ಲಿ ಮಣ್ಣಾಯಿತು.

### ರಾಜ್ಯ ಸರ್ಕಾರಗಳಿಗೆ ಸುಪ್ರೀಂ ನಿರ್ದೇಶನ

## ಗೋರಕ್ಷಣೆ ನೆಪದ ಹಿಂಸೆ ತಡೆಗೆ ನೋಡಲ್ ಅಧಿಕಾರಿ ನೇಮಿಸಿ

ಹೊಸದಿಲ್ಲಿ,ಸೆ.೬– ಗೋರಕ್ಷಣೆ ಹೆಸರಿನಲ್ಲಿ ದೇಶದ ಹಲವೆಡೆ ನಡೆಯುತ್ತಿರುವ ಹಿಂಸಾಚಾರವನ್ನು ಸಮರ್ಥವಾಗಿ ತಡೆಯಲು ಪ್ರತಿ ಜಿಲ್ಲೆಯಲ್ಲಿಯೂ ಒಬ್ಬ ನೋಡಲ್ ಅಧಿಕಾರಿ ನೇಮಿಸುವಂತೆ ಸರ್ವೋಚ್ಚ ನ್ಯಾಯಾಲಯ ಎಲ್ಲ ರಾಜ್ಯ ಸರ್ಕಾರಗಳಿಗೂ ಬುಧವಾರ ನಿರ್ದೇಶನ ನೀಡಿದೆ.



ಮಹಾತ್ಮ ಗಾಂಧಿ ಅವರ ಮೊಮ್ಮಗ ತುಷಾರ್ ಗಾಂಧಿ ಅವರು ಗೋರಕ್ಷಣೆ ಹೆಸರಿನಲ್ಲಿ ನಡೆಯುವ ಹಿಂಸಾಚಾರ ತಡೆಗೆ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ನ್ಯಾಯ ಪೀಠ ಈ ಆದೇಶ ಹೊರಡಿಸಿದೆ.

ಗೋರಕ್ಷಣೆ ನೆಪದ ಹಿಂಸೆ ತಡೆಗೆ ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ, ಕಾನೂನು – ಸುವ್ಯವಸ್ಥೆಗೆ ಸಂಬಂಧಿಸಿ ರಾಜ್ಯಗಳಿಗೆ ನಿರ್ದೇಶನ ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ನ್ಯಾಯಪೀಠ ಸೂಚಿಸಿದೆ.


ಸೋನಿಯಾ ರಕ್ಷಣೆಗಿದ್ದ ಕಮಾಂಡೊ ನಾಪತ್ತೆ! ⏭ ಪುಟ ೧೦

ಸಂಘದಿಂದಲೇ ಒಕ್ಕಲಿಗ ಸಮೀಕ್ಷೆ: ಚುಂಚಶ್ರೀ ೧೦

ಟಿ-೨೦ಯಲ್ಲೂ ಭಾರತ ಗೆಲುವಿನ ಓಟ ೧೧


## ೨೫೦ ಬಿಜೆಪಿ ಕಾರ್ಯಕರ್ತರ ಬಂಧನ

### ಬೈಕ್ ರ್‍ಯಾಲಿ, ನಾಳೆ ಮಂಗಳೂರಿನಲ್ಲಿ ಸಮಾವೇಶ ನಡೆದೇ ತೀರುತ್ತದೆ: ಸಂಸದ ಪ್ರತಾಪಸಿಂಹ

ಮೈಸೂರು,ಸೆ.೬– ಮಂಗಳೂರು ಚಲೋಗಾಗಿ ಮೋಟಾರ್ ಬೈಕ್ ರ್‍ಯಾಲಿ ನಡೆಸದಂತೆ ತಡೆಯಲು ನಿಷೇಧಾಜ್ಞೆ ವಿಧಿಸಿರುವುದನ್ನು ಖಂಡಿಸಿ ಬಿಜೆಪಿ ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಸಿದ್ದು, ಈ ವೇಳೆ ೨೫೦ ಕಾರ್ಯಕರ್ತರನ್ನು ನಗರ ಪೊಲೀಸರು ಬಂಧಿಸಿದ್ದಾರೆ.

೧೪೪ ಸೆಕ್ಷನ್ ಅಡಿ ನಿಷೇಧಾಜ್ಞೆ ಜಾರಿಗೊಳಿಸಿದ್ದರೂ ಬಿಜೆಪಿ ಕಾರ್ಯಕರ್ತರು ಸಂಸದ ಪ್ರತಾಪ್ ಸಿಂಹ ನೇತೃತ್ವದಲ್ಲಿ ಬುಧವಾರ ಬೆಳಿಗ್ಗೆ ಗಾಂಧಿ ವೃತ್ತ ಸಮೀಪ ಜಮಾವಣೆಗೊಂಡು ಅರಮನೆ ಮುಂಭಾಗದವರೆಗೆ ಮೆರವಣಿಗೆ ನಡೆಸಿದರು. ರಾಜ್ಯ ಸರ್ಕಾರದ ವಿರುದ್ಧ ಹಾಗೂ ಹಿಂದೂಗಳ ಕೊಲೆಯಾಗುತ್ತಿರುವುದನ್ನು ಖಂಡಿಸಿ ಘೋಷಣೆಗಳನ್ನು ಕೂಗಿದರು.

ಇದೇ ಸಂದರ್ಭದಲ್ಲಿ ಸಂಸದ ಪ್ರತಾಪ ಸಿಂಹ ಮಾತನಾಡಿದರು.

⏭ ೮



ಮೈಸೂರಿನ ಗಾಂಧಿವೃತ್ತದಲ್ಲಿ ಸಂಸದ ಪ್ರತಾಪಸಿಂಹ ನೇತೃತ್ವದಲ್ಲಿ ಬುಧವಾರ ಪ್ರತಿಭಟನೆ ನಡೆಸುತ್ತಿದ್ದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಕರೆದೊಯ್ದರು.


Thursday 7 Septembar 2017
ಆಂದೋಲನ ಸುದ್ದಿಗಾಗಿ
andolana@gmail.com



ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 393
ದೂರವಾಣಿ: 2425156

22 ಕ್ಯಾರೆಟ್ ಚಿನ್ನದ ದರ
ತೊಳಸಿ
THOLASI JEWELS
₹2820
1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926